ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ಇದು ಹಕ್ಕುಚ್ಯುತಿ ಆಗುತ್ತದೆ. ನಮ್ಮ ಸ್ನೇಹಿತರು ಈ ರೀತಿ ನನ್ನ ಮೇಲೆ ಆರೋಪಣೆ ಮಾಡತಕ್ಕಂಥಾದ್ದು ಅಲ್ಲ. ಏಕೆಂದರೆ, ಅನೇಕ ಸಾರಿ ಅವರೂ ನಾವೆಲ್ಲಾ ಒಟ್ಟೊಟ್ಟಿಗೆ ಓಡಾಡಿದ್ದೇವೆ. ಅದರ ವಾಸನೆಯೂ ಕೂಡ ನನಗೆ ಸಿಕ್ಕಿಲ್ಲ.

ಶ್ರೀ ಎಂ.ಎ. ವೆಂಕಟಪ್ಪ:- ಮಜ್ಜಿಗೆ ಕುಡಿದಿದ್ದಾರೆ ಎಂದು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಈಚಲ ಮರದ ಕೆಳಗೆ ಕುಳಿತು ಮಜ್ಜಿಗೆಯನ್ನು ಕುಡಿದರೆ ಅದನ್ನು ಹೆಂಡ ಎಂದು ಹೇಳುತ್ತಾರೆ. ನಾವು ಏನು ಮಾಡುವುದಕ್ಕಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಪಾನನಿರೋಧವನ್ನು ಪ್ರಾಯೋಗಿಕವಾಗಿಯಾದರೂ ಕೆಲವು ಜಿಲ್ಲೆಗಳಲ್ಲಿ ಜಾರಿಗೊಳಿಸಲಿಕ್ಕೆ ಸರ್ಕಾರ ವಿಚಾರ ಮಾಡುವುದೆ?

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಸದಸ್ಯರು ಏನು ಒಂದು ಸೂಚನೆಯನ್ನು ಕೊಟ್ಟಿದ್ದಾರೆ, ಅದರ ಬಗ್ಗೆ ಆಲೋಚನೆ ಮಾಡುತ್ತೇನೆ.

ವಿಷಯ:- ಕನ್ನಡ ಚಲನಚಿತ್ರಗಳ ತಯಾರಿಕೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೩:- (೨೨)
ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ)
ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ೧೯೯೨-೯೩ನೇ ಸಾಲಿನಲ್ಲಿ ರಾಜ್ಯದಲ್ಲಿಯೇ ತಯಾರಾದ ಕನ್ನಡ ಚಲನಚಿತ್ರಗಳೆಷ್ಟು. ಮತ್ತು ಹೊರರಾಜ್ಯದಲ್ಲಿ ತಯಾರಾದ ಕನ್ನಡ ಚಲನಚಿತ್ರಗಳೆಷ್ಟು?

ಆ) ರಾಜ್ಯದಲ್ಲಿಯೇ ತಯಾರಾದ ಕನ್ನಡ ಚಲನಚಿತ್ರಗಳಿಗೆ ನೀಡುತ್ತಿರುವ ಸಹಾಯಧನದ ಪ್ರಮಾಣವನ್ನು ಹೆಚ್ಚಿಸಲು ಸರ್ಕಾರವು ಉದ್ದೇಶಿಸಿರುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ
(ಮುಖ್ಯ ಮಂತ್ರಿಗಳು)

೭೬
ವಿವರಗಳು ಲಭ್ಯವಿರುವುದಿಲ್ಲ.
ಇಲ್ಲ.

ಶ್ರೀ ಕೆ.ಆರ್. ಹರ್ಷಕುಮಾರ್ ಗೌಡ:- ಮಾನ್ಯ ಅಧ್ಯಕ್ಷರೇ, ಹೊರ ರಾಜ್ಯದಲ್ಲಿ ತಯಾರಾದ ಕನ್ನಡ ಚಲನಚಿತ್ರಗಳ ವಿವರಗಳು ಲಭ್ಯವಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಹೊರರಾಜ್ಯಗಳಲ್ಲಿ ಕನ್ನಡ ಚಲನಚಿತ್ರಗಳ ಚಿತ್ರೀಕರಣ ಆಗಿಲ್ಲವೇ? ಅದರ ಬಗ್ಗೆ ವಿವರಗಳು ಏಕೆ ಲಭ್ಯವಾಗಿಲ್ಲ ಎನ್ನುವುದರ ಬಗ್ಗೆ ಮಾಹಿತಿ ಬೇಕು. ಎರಡನೇ ಪ್ರಶ್ನೆಯಲ್ಲಿ ರಾಜ್ಯದಲ್ಲಿಯೇ ತಯಾರಾದ ಕನ್ನಡ ಚಲನಚಿತ್ರಗಳಿಗೆ ನೀಡುತ್ತಿರುವ ಸಹಾಯಧನ ಪ್ರಮಾಣವನ್ನು ಹೆಚ್ಚು ಮಾಡುವ ಉದ್ದೇಶ ಏನಾದರೂ ಸರ್ಕಾರಕ್ಕೆ ಇದೆಯೆ? ಎಂದು ಕೇಳಿದ್ದೇನೆ. ಅದಕ್ಕೆ ಮುಖ್ಯಮಂತ್ರಿಗಳು ಇಲ್ಲವೆಂದು ಹೇಳಿದ್ದಾರೆ. ಈಗ ಅನಧಿಕೃತವಾಗಿ, ಅಕ್ರಮವಾಗಿ ಕೇಬಲ್ ಟಿ.ವಿ ಜಾಲ ನಡೆಯುತ್ತಿದೆ. ಅದರಿಂದ ಪರೋಕ್ಷವಾಗಿ ಚಲನಚಿತ್ರ ಮಾಧ್ಯಮದ ಮೇಲೆ ಪ್ರಭಾವ ಬೀರಿದೆ. ನಾನು ತಮ್ಮ ಮುಖಾಂತರ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಈ ಅಕ್ರಮವಾಗಿ ನಡೆಯುತ್ತಿರುವ ವ್ಯವಹಾರವನ್ನು ನಿಲ್ಲಿಸುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ. ಎಷ್ಟು ಜನರ ಮೇಲೆ ಮೊಕದ್ದಮೆ ಹೂಡಿದೆ.

ಶ್ರೀ ಎಂ. ಎೀರಪ್ಪ ಮೊಯಿಲಿ:- ನಮ್ಮ ರಾಜ್ಯದಲ್ಲಿ ತಯಾರಾದ ಚಲನಚಿತ್ರಗಳ ಬಗ್ಗೆ ನಾನು ಎವರಗಳನ್ನು ಕೊಟ್ಟಿದ್ದೇನೆ. ಹೊರರಾಜ್ಯಗಳಲ್ಲಿ ತಯಾರಾದ ಕನ್ನಡ ಚಲನಚಿತ್ರಗಳ ಬಗ್ಗೆ ನನ್ನ ಹತ್ತಿರ ಎವರ ಇಲ್ಲ. ಏಕೆಂದರೆ ಇಲ್ಲಿ ಸಹಾಯಧನ ಸಿಕ್ಕುವಾಗ ಹೊರರಾಜ್ಯದಲ್ಲಿ ಅವರು ಮಾಡುವುದಿಲ್ಲ. ಸಾಧಾರಣವಾಗಿ ಇಲ್ಲೇಮಾಡಿ ಸಹಾಯಧನ ಪಡೆಯುವ ವ್ಯವಸ್ಥೆ ಈ ಚಲನಚಿತ್ರ ರಂಗದವರು ಮಾಡುತ್ತಾರೆ. ಕೇಬಲ್ ಟಿ.ವಿ ಬಗ್ಗೆ ಅವರು ಇಲ್ಲಿ ಪ್ರಶ್ನೆಯನ್ನು ಕೇಳಿಲ್ಲ. ಎವರಗಳು ಬೇಕಾದರೆ ಬೇರೆ ಇನ್ನೊಂದು ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇವೆ.

ಶ್ರೀ ಡಿ.ಕೆ. ಶಿವಕುಮಾರ್:- ಮಾನ್ಯ ಮುಖ್ಯಮಂತ್ರಿಗಳು ಅದರ ವಿಚಾರದಲ್ಲಿ ಉತ್ತರಕೊಡಬೇಕು. ೪೦-೫೦ಸಾವಿರ ರೂಪಾಯಿಗಳನ್ನು ಕೊಟ್ಟು ಥಿಯೇಟರ್‌ಗಳಲ್ಲಿ ಚಿತ್ರ ಪ್ರದರ್ಶನಮಾಡುವಾಗ ೮ ರೂಪಾಯಿಗಳ ಒಂದು ಕ್ಯಾಸೆಟ್ ತಂದು ನೂರು ಮನೆಗಳಿಗೆ ಚಿತ್ರವನ್ನು ತೋರಿಸಿದರೆ ಚಲನಚಿತ್ರದ ಉದ್ಯಮ ಏನಾಗಬೇಕು. ಅದುದರಿಂದ ಸುಮ್ಮನೆ ಕುಳಿತರೆ ಆಗುವುದಿಲ್ಲ. ಇದರಿಂದ ೭೦೦-೮೦೦ ಥಿಯೇಟರ್‌ಗಳಿಗೆ ಬಹಳ ತೊಂದರೆ ಆಗುತ್ತದೆ. ದಯವಿಟ್ಟು ಇದರ ಬಗ್ಗೆ ತಾವು ಸರಿಯಾಗಿ ಉತ್ತರ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್:- ಕನ್ನಡ ಚಲನಚಿತ್ರಗಳ ಬೆಳವಣಿಗೆಯಾಗಬೇಕೆಂದು ಬಹಳ ವರ್ಷಗಳಿಂದ ಅಂದರೆ ಮಾನ್ಯ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಯಾಗಿದ್ದಾಗ, ಶ್ರೀ ರಾಮಕೃಷ್ಣ ಹೆಗಡೆಯವರು ಆರ್ಥಿಕ ಸಚಿವರಾಗಿದ್ದರು. ಆಗ ಒಂದು ಚೈತನ್ಯ ಪ್ರಾರಂಭವಾಗಿ ಹೊಸ ರೂಪ ಬಂತು. ಈಗ ಇವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕನ್ನಡ ಚಲನಚಿತ್ರಗಳ ಬೆಳವಣಿಗೆ ಬಗ್ಗೆ, ಈ ಇಲಾಖೆ ಬಗ್ಗೆ, ಅದರ ಒಂದು ಸ್ವರೂಪದ ಬಗ್ಗೆ ಒಂದು ಹೊಸಚಿಂತನೆ ಇಟ್ಟುಕೊಂಡಿದ್ದಾರೆ, ಅದಕ್ಕಾಗಿ ಸಂತೋಷಪಡುತ್ತೇನೆ. ಆದರೆ ಒಂದು ಮಾತನ್ನು ಹೇಳುತ್ತೇನೆ. ಕನ್ನಡ ಚಲನಚಿತ್ರಗಳಲ್ಲೂ ಈಗ ಕೆಟ್ಟ ಚಿತ್ರಗಳು ಬರುತ್ತಿವೆ. ತಮಿಳುನಾಡಿನಲ್ಲಿ ಮತ್ತು ಕೇರಳದಲ್ಲಿ ತಯಾರಾಗುವ ರೀತಿಯಲ್ಲೇ ರೀಮೇಕ್ ಯಥಾವತ್ತಾಗಿ ಚಿತ್ರಗಳನ್ನು ತೆಗೆಯುತ್ತಿದ್ದಾರೆ. ಕೆಟ್ಟ ಚಿತ್ರಗಳಿಗೂ ಸರ್ಕಾರ ಸಹಾಯಧನವನ್ನು ಕೊಡುತ್ತದೆಯೇ ಎಂಬುದು ಒಂದು, ಇವತ್ತು ಇದನ್ನು ನಿಲ್ಲಿಸತಕ್ಕದ್ದು ಒಳ್ಳೆಯದು. ನಮ್ಮಲ್ಲಿ ಒಳ್ಳೆಯ ಸಾಹಿತ್ಯಗಳು ಬೇಕಾದಷ್ಟು ಇದೆ, ಸಾಹಿತಿಗಳಿದ್ದಾರೆ. ಇಂಥ ದೊಡ್ಡ ಸಾಹಿತ್ಯ ಇರುವಾಗ ಅದನ್ನು ಬಿಟ್ಟು ಬೇರೆ ಹೊರಗಡೆ ತಯಾರಾದ ಚಿತ್ರಗಳನ್ನು ಯಥಾವತ್ತಾಗಿ ತೆಗೆಯತಕ್ಕಂಥ ಕೆಟ್ಟ ಸಂಸ್ಕೃತಿ ನಮ್ಮಲ್ಲಿ ಬಂದಿದೆ. ಇದನ್ನು ನಿಲ್ಲಿಸತಕ್ಕ ಕ್ರಮ ತೆಗೆದುಕೊಳ್ಳುತ್ತೀರ? ಕೇರಳದಲ್ಲಿ ಕನ್ನಡ ಚಿತ್ರಗಳನ್ನು ಪ್ರದರ್ಶಿಸುತ್ತಿಲ್ಲ ಮತ್ತು ಆಂಧ್ರ ತಮಿಳುನಾಡಿನಲ್ಲೂ ಇಲ್ಲ. ಬೇರೆ ರಾಜ್ಯಗಳು ಕನ್ನಡ ಚಿತ್ರಗಳನ್ನು ಪ್ರದರ್ಶಿಸುತ್ತಿಲ್ಲ ಎಂದ ಮೇಲೆ ಕರ್ನಾಟಕದಲ್ಲಿ ಬೇರೆ ಭಾಷೆಗಳ ಚಿತ್ರಗಳನ್ನು ತಡೆಯುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ?

ಅಧ್ಯಕ್ಷರು:- ಬೇರೆ ಪ್ರಶ್ನೆ ಕೇಳಿ.

ಶ್ರೀ ವಾಟಾಳ್ ನಾಗರಾಜ್:- ಇದು ಪ್ರಮುಖವಾದ ಪ್ರಶ್ನೆ. ಈ ಪ್ರಶ್ನೆಗೆ ಮುಖ್ಯಮಂತ್ರಿಗಳು ದಯವಿಟ್ಟು ಉತ್ತರ ಕೊಡಬೇಕು ಎಂದು ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ. ಇದು ಅಪ್ಯಾಯಮಾನವಾದ ಚಿಂತನೆ. ನಾನು ಸುಮಾರು ಮೂವತ್ತು ವರ್ಷಗಳು ಹೋರಾಟ ಮಾಡಿದ್ದೇನೆ. ದಯಮಾಡಿ ಇದಕ್ಕೆ ಮುಖ್ಯಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಎಂ. ಎೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಶಿವಕುಮಾರ್‌ರವರು, ಶ್ರೀ ವಾಟಾಳ್ ನಾಗರಾಜ್‌ರವರು ಬೇರೆ ಬೇರೆ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

ಸನ್ಮಾನ್ಯ ಶಿವಕುಮಾರ್‌ರವರು ಹೇಳಿದ್ದಂಥ ಪ್ರಶ್ನೆ ವಾಸ್ತವವಾಗಿದೆ. ನಮ್ಮ ಕನ್ನಡ ಚಲನಚಿತ್ರ ಕ್ಷೇತ್ರಕ್ಕೆ ಒಂದು ರೀತಿಯ ದೊಡ್ಡ ಆಘಾತವಾಗತಕ್ಕಂಥ ಪರಿಸ್ಥಿತಿಯಲ್ಲಿ ಏಡಿಯೋ ಹಾವಳಿ ನಡೆಯುತ್ತಿದೆ. ಅದಕ್ಕೋಸ್ಕರ ಬಹುಶಃ ಕೇಂದ್ರ ಸರ್ಕಾರ ಕಾನೂನು ಮಾಡಬೇಕಾಗಿದೆ. ನಾವು ನಮ್ಮ ಕಾನೂನಿನ ಮಿತಿಯಲ್ಲಿ ಅಥವಾ ಹೊಸದಾಗಿ ಏನಾದರೂ ಕಾನೂನು ಮಾಡಿ ಇದರ ಬಗ್ಗೆ ಸರಿಯಾದ ನಿಯಂತ್ರಣ ಮಾಡುವುದು ಇದ್ದರೆ. ನಾನು ಅದಕ್ಕೆ ಸಿದ್ಧನಾಗಿದ್ದೇನೆ. ಪ್ರತ್ಯೇಕವಾಗಿ ಅದರ ವಿಚಾರ ಮಾಡುತ್ತೇವೆ. ತಾವು ಹೇಳಿದ್ದು ಸರಿ. ಏಕೆಂದರೆ, ಇಷ್ಟೆಲ್ಲಾ ಬಂಡವಾಳ ಹಾಕಿ ಥಿಯೇಟರ್‌ಗಳನ್ನು ಮಾಡಿದ್ದಾರೆ. ಬೆಂಗಳೂರಿನಲ್ಲಿ ಆ ಥಿಯೇಟರ್‌ಗಳು ಈಗಾಗಲೇ ಷಾಪಿಂಗ್ ಕಾಂಪ್ಲೆಕ್ಸ್ ಆಗಿಬಿಟ್ಟಿದೆ. ಇನ್ನು ಮುಂದೆ ಥಿಯೇಟರ್‌ಗಳ ಡೆವಲಪ್‌ಮೆಂಟ್ ಆಗದೇ ಇದ್ದರೆ, ಅವನ್ನು ನಾವು ಉಳಿಸದೇ ಇದ್ದರೆ, ಕನ್ನಡ ಸಾಂಸ್ಕೃತಿಕ ಜಗತ್ತಿಗೆ ಸಾಕಷ್ಟು ನಷ್ಟ ಆಗುತ್ತದೆ. ಇದರ ಬಗ್ಗೆ ನಾವು ತೀವ್ರವಾಗಿ ಚಿಂತನೆ ಮಾಡಬೇಕಾಗುತ್ತದೆಂಬುದನ್ನು ನಾನು ಖಂಡಿತವಾಗಿ ಒಪ್ಪುತ್ತೇನೆ. ಇದರಲ್ಲಿ ಆಸಕ್ತಿ ಇರತಕ್ಕಂತ ಮಾನ್ಯ ಸದಸ್ಯರನ್ನು ಕರೆಯಿಸಿ ಪ್ರತ್ಯೇಕವಾಗಿ ಮಾತುಕತೆ ಮಾಡುತ್ತೇನೆ. ರೀಮೇಕ್ ಚಿತ್ರಗಳ ಬಗ್ಗೆ ಏನು ಮಾಡುತ್ತೀರಿ ಎಂದು ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದ್ದುದು ಸರಿ. ಏಕೆಂದರೆ, ಇವತ್ತು ಅವುಗಳಲ್ಲಿ ಸ್ವಂತಿಕೆ ಇಲ್ಲ. ಸಹಾಯಧನ ಕೊಡುತ್ತಿರುವುದಾದರೂ ಏಕೆ? ಕನ್ನಡ ಚಲನಚಿತ್ರ ಪ್ರಪಂಚದಲ್ಲಿ ಸಾಂಸ್ಕೃತಿಕ ಜಗತ್ತಿನಲ್ಲಿ ಒಂದು ಸ್ವಂತಿಕೆ ಬರಬೇಕು, ವ್ಯಕ್ತಿತ್ವ ಬರಬೇಕು, ಇದು ಹುಲುಸಾಗಿ ಬೆಳೆಯಬೇಕು ಎನ್ನುವ ಉದ್ದೇಶದಿಂದ ಮಾಡಿದ್ದುದು. ತಾವು ಏನು ಸೂಚನೆ ಕೊಟ್ಟಿದ್ದೀರಿ ಅದರ ಬಗ್ಗೆ ನಾವು ತೀವ್ರವಾಗಿ ಗಮನ ಕೊಡುತ್ತೇವೆ.

ಅಧ್ಯಕ್ಷರು:- ಮಾನ್ಯ ದಯಾನಂದರಾವ್‌ರವರೇ, ನಿಮ್ಮ ೨ಆನೇ ಪ್ರಶ್ನೆಯನ್ನು ಬೇರೆ ಇಲಾಖೆಗೆ ಉತ್ತರಕ್ಕಾಗಿ ಕಳಿಸಿರುವುದರಿಂದ ಇನ್ನೊಂದು ದಿವಸ ತೆಗೆದುಕೊಳ್ಳುತ್ತೇವೆ.

ವಿಷಯ:- ತ್ರಿವರ್ಣ ಕಾರ್ಡುಗಳ ವಿತರಣೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೫:- (೫೦೯)
ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್)
ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ತ್ರಿವರ್ಣ ಧ್ವಜ (ಹಸಿರು) ಕಾರ್ಡ್ ಹಾಗೂ ಕೇಸರಿ ಕಾರ್ಡ್ ವಿತರಿಸಲಾಗಿದೆ.

ಆ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ತ್ರಿವರ್ಣ ಧಜ (ಹಸಿರು) ಹಾಗೂ ಕೇಸರಿ ಕಾರ್ಡ್ ವಿತರಿಸಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು)

ಇ) ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಅನೇಕ ಅರ್ಹ ಫಲಾನುಭವಿಗಳಿಗೆ ಹಸಿರು ಕಾರ್ಡ್ ಸಿಗದೆ ಇದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಈ) ಹಾಗಿದ್ದಲ್ಲಿ ಅದನ್ನು ಎಷ್ಟು ದಿನಗಳಲ್ಲಿ ಸರಿಪಡಿಸಲಾಗುವುದು?

ಶ್ರೀಮತಿ ಮನೋರಮ ಮಧ್ವರಾಜ್
(ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ತ್ರಿವರ್ಣ ಪಡಿತರ ಚೀಟಿಗಳು: ೨೭,೫೧,೩೩೨
ಕೇಸರಿ ಪಡಿತರ ಚೀಟಿಗಳು: ೨೭,೫೨,೨೮೪
ತ್ರಿವರ್ಣ ಪಡಿತರ ಚೀಟಿಗಳು: ೨,೫೭,೩೭೨
ಕೇಸರಿ ಪಡಿತರ ಚೀಟಿಗಳು: ೧,೪೪,೮೭೪